# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 628/2013

**ಚಾಸಾ ಃ- 06 / ಪ್ರಾಸಾ ಃ- 04**

| | |
|---|---|
| ಹೆಸರು | **ಡಾಃ ಎಸ್ ಎನ್ ಜ್ಞಾನಪ್ರಕಾಶ್** |
| ತಂದೆಯ ಹೆಸರು | **ಎಸ್ ಆರ್ ನಾರಾಯಣಸ್ವಾಮಿ** |
| ವಯಸ್ಸು | **56 ವರ್ಷ** |
| ಉದ್ಯೋಗ | **ಹಿರಿಯ ವೈದ್ಯಾಧಿಕಾರಿಗಳು, ಆನೇಕಲ್ ಸರ್ಕಾರಿ ಆಸ್ಪತ್ರೆ** |
| ವಿಳಾಸ | **ಆನೇಕಲ್** |

**ದಿನಾಂಕಃ 08.04.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 18 ಜುಲೈ 2010 ರಿಂದ 13 ಜುಲೈ 2025ವರೆಗೂ ಮಾಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಹಿರಿಯ ವೈದ್ಯಾಧಿಕಾರಿ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ 30.01.2013 ರಂದು ಸುಮಾರು ಸಂಜೆ 8.20ರ ಸಮಯದಲ್ಲಿ ಸೈಯ್ಯದ್ ನಜರುಲ್ಲಾ ಬಿನ್ ಸೈಯದ್ ಖಾಸಿಂ ಇವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ನನ್ನ ಬಳಿ ಬಂದಿರುತ್ತಾರೆ. ಸದರಿಯವರನ್ನು ವೈದ್ಯಕೀಯ ತಪಾಸಣೆ ಮಾಡಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಅವರ ಮುಂದಲೆಯಲ್ಲಿ ರಕ್ತ ಸ್ರಾವದಿಂದ ಕೂಡಿದ ಹರಿದ ಅಂಚುಗಳುಳ್ಳ ಮಾಂಸಕಾಂಡ ಕಾಣುವಂತಹ 9X1 ಸೆ.ಮೀ ಇರುವ ಸೀಳು ಗಾಯ ಕಂಡು ಬಂದಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಗಾಯದ ಅವದಿಯು 2 ಗಂಟೆಯ ಒಳಗಡೆ ಆಗಿರುತ್ತದೆ. ಈಗ ಸಾಕ್ಷಿಗೆ ನಿಪಿ-06ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು** ಃ- **ಶ್ರೀ. ಎಸ್.ಹೆಚ್.ಜಿ.** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಸದರಿ ದಿನದಂದು ನೀವು ಕರ್ತವ್ಯದಲ್ಲಿ ಇದ್ದ ಬಗ್ಗೆ ದಾಖಲೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಚಾಸಾ-1ರವರ ಜೊತೆ ಯಾರಾದರೂ ಬಂದಿದ್ದಾರ ಎಂದರೆ ಸಾಕ್ಷಿಯು ಅವರ ಪತ್ನಿ ನಾಜ್ ನೀನ್ ತಾಜ್ ಎಂದು ನುಡಿಯುತ್ತಾರೆ. ಚಾಸಾ-1ರವರು ಆಸ್ಪತ್ರೆಗೆ ಬಂದಾಗ ಅವರಿಗೆ ಪ್ರಜ್ಞೆ ಇತ್ತು ಎಂದರೆ ಸಾಕ್ಷಿಯು ಇತ್ತು ಎಂದು ನುಡಿಯುತ್ತಾರೆ. ಚಾಸಾ-1ರವರು ಯಾವುದೇ ಆಯುಧವನ್ನು ನಿಮ್ಮ ಬಳಿ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಪಿ-6 ರಲ್ಲಿ ನಮೂದಿಸಿರುವ ಗಾಯವು ಸಾಮಾನ್ಯವಾಗಿ ಚೂಪಾದ ಕಲ್ಲಿನ ಮೇಲೆ ಬಿದ್ದರೆ ಆಗುತ್ತದೆ ಎಂದರೆ ಸಾಕ್ಷಿಯು ಆಗಬಹುದು ಎಂದು ನುಡಿಯುತ್ತಾರೆ. ಚಾಸಾ-1ರವರಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ ಪೋಲೀಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರೀ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಗಾಯವು ಯಾವ ರೀತಿ ಆಗಿರುತ್ತದೆ ಎಂದು ನಿಮಗೆ ಹೇಳಿರುತ್ತಾರಾ ಎಂದರೆ ಸಾಕ್ಷಿಯು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನೀವು ಪೋಲೀಸರನ್ನು ಕರಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪೋಲಿಸರಿಗೆ ಸಹಾಯ ಮಾಡಲು ಒಂದು ಸುಳ್ಳು ಗಾಯದ ಪ್ರಮಾಣಪತ್ರವನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರೀ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ . ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**